ಆ) ಹಾಗಿದ್ದಲ್ಲಿ ಈ ಯೋಜನೆಯು ವಿಳಂಬಕ್ಕೆ ಕಾರಣಗಳೇನು ?

ಇ) ಶೀಘ್ರವಾಗಿ ಸರ್ಕಾರ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭಿಸಲಾಗುವುದೆ ?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು)

ಅ) ಹೌದು

ಆ) ಆಡಳಿತ ಮಂಜೂರಾತಿ ಕೊಡುವ ಪ್ರಶ್ನೆ ಪರಿಶೀಲನೆಯಲ್ಲಿದೆ.

ಇ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಬಿ. ಆರ್. ಯಾವಗಲ್.—ಈ ಪ್ರದೇಶ ಬ್ಯಾಕ್‌ವರ್ಡ್ ಲಿಸ್ಟ್‌ನಲ್ಲಿದೆ. ಇಂದಿನ ನೀರು ಪೂರೈಕೆ ವ್ಯವಸ್ಥೆ ಸರಿಯಾಗಿಲ್ಲದಿರುವುದರಿಂದ ಇದನ್ನು ಸರಿಪಡಿಸುವುದಾಗಿ ನಮಗೆ ಭರವಸೆಯನ್ನು ಕೊಡುತ್ತೀರಾ ?

ಇನ್ನು ಎರಡನೆಯದಾಗಿ, ಈ ಯೋಜನೆಯನ್ನು ೧೯೮೨ರಲ್ಲೇ ಪೂರ್ತಿಮಾಡಬೇಕೆಂದು ಬೆಳಗಾವಿನಲ್ಲಿ ನಡೆದಂಥ ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನಿಸಿದ್ದರೂ ಕೂಡ ಇದುವರೆಗೂ ಏತಕ್ಕೆ ಪೂರ್ತಿ ಮಾಡಲಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಸುಮಾರು ೯೦ ಲಕ್ಷ ರೂ. ನ ಸುಧಾರಿತ ಕುಡಿಯುವ ನೀರಿನ ಯೋಜನೆ ಎಂದು ಒಂದು ಅಂದಾಜು ಸಿದ್ಧವಾಗಿದೆ, ಅದು ಸರ್ಕಾರಕ್ಕೂ ಕೂಡ ಬಂದಿದೆ. ಈ ವರ್ಷವೇ ಇದು ಮಂಜೂರಾಗಬೇಕಾಗಿತ್ತು. ಆದರೆ ಇಂದಿನ ಆರ್ಥಿಕಪರಿಸ್ಥಿತಿ ಸರಿಯಿಲ್ಲದಿರುವುದರಿಂದ ಈ ವರ್ಷ ಇದನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಮುಂದಿನ ವರ್ಷ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು. ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ಕೊಡಲಾದ ಉತ್ತರಗಳು

SRI LAKSHMISAGAR Minister of Law and Parliamentary Affairs.—Sir, I beg to lay on the table of the House Questions for written answers-31st list.

ದಕ್ಷಿಣ ಕನ್ನಡ ಜಿಲ್ಲೆಯ ರೈತರ ಹಾಗೂ ಕೃಷಿಕರ ಬೆಳೆಯು ನಾಶವಾದ ಬಗ್ಗೆ

೨೩೫. ಶ್ರೀ ಬಾಕಿಲ ಹುಕ್ರಪ್ಪ (ಸೂಳ್ಯ) ಈ ಕೆಳಕಂಡ ಪ್ರಶ್ನೆಗಳಿಗೆ ಕಂದಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಈ ವರ್ಷದ ಬರಗಾಲ ಪೀಡಿತ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಸುಳ್ಯ ಮತ್ತು ಪುತ್ತೂರು ಕ್ಷೇತ್ರಗಳಲ್ಲಿದ್ದ ರೈತರ ಹಾಗೂ ಕೃಷಿಕರ ಬೆಳೆಯು ನೀರಿಲ್ಲದೆ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ :

(ಆ) ಈ ಬಗ್ಗೆ ರೈತರಿಗೂ ಹಾಗೂ ಕೃಷಿಕರಿಗೆ ಸರಕಾರದವರ ಜೊಕ್ಕಸದಿಂದ ಪರಿಹಾರ ಧನ ಸಹಾಯ ಮಾಡಲಾಗುವುದೇ.

ಶ್ರೀ ವಿ. ಎಲ್. ಪಾಟೀಲ್.ಮಾನ್ಯ (ಕಂದಾಯ ಮಂತ್ರಿಗಳು).—

ಅ) ನೀರಿನ ಅಭಾವದಿಂದಾಗಿ ಭತ್ತದ ಬೆಳೆ ನಾಶವಾಗಿರುವುದಿಲ್ಲ. ಆದರೆ ಈ ವರ್ಷದ ಮೇ ಮತ್ತು ಜೂನ್ ತಿಂಗಳ ಪ್ರಥಮ ಪಾಕ್ಷೀಕದಲ್ಲಿ ಸಕಾಲದಲ್ಲಿ ಮಳೆ ಬಾರದಿದ್ದುದರಿಂದ ಅಡಿಕೆ ಬೆಳೆಗೆ ಸ್ವಲ್ಪ ಹಾನಿಯಾಗಿರುತ್ತದೆ.

ಆ) ಸರ್ಕಾರವು ಈ ಸಂದರ್ಭದಲ್ಲಿ ಯಾವ ಪರಿಹಾರವನ್ನೂ ನೀಡಿರುವುದಿಲ್ಲ.